

ಲೆಂದೇ ಹುಟ್ಟಿದೂರನು ಬಿಟ್ಟು ಎಷ್ಟೊ ಸಾವಿರ
ಯೋಜನ ದೂರ ಹೋಗುತ್ತಿರುವ ನಿನ್ನೊಳ
ದುಃಖಕ್ಕೆ ಕಾರಣವಾದೀ ಅಮ್ಮನನು ಕ್ಷಮಿಸೆಂದು
ನಾನು ಕೇಳುವುದಿಲ್ಲ; ಒಂದಿಲ್ಲೊಂದು ದಿನ
ಅರ್ಥವಾಗುವುದು ನಿನಗೆ ಅಮ್ಮ ರಖಾವು
ಆಗಿದ್ದರಿಂದಲೇ ನೀನು ಉಳಿದದ್ದೆಂಬ
ನಡೆಯಬಾರದಾಗಿದ್ದ ನಡೆಸತ್ಯ

ಹೋಗಿ ಬಾ; ದೀರ್ಘಾಯುಷ್ಯವಿರಲಿ
ಕಲಿತವನಾಗಿ ಬಾ; ಅರಿತವನಾಗಿ ಬಾ
ಓದಿನಲಿ ಅಪ್ಪನ ಅಚ್ಚು ನೀನು; ಹೇಳುವುದೇ
ಬೇಡ; ಪದಕಗಳ ಮಾಲೆ ತೊಡುವೆ; ಅಂಥ
ಸಂಭ್ರಮದಲ್ಲಿ ಅಪ್ಪನ ಹೆಸರ ಹೇಳುವುದ
ತಪ್ಪಿಸಬೇಡ; ಅವರು ಅಲ್ಲಿಂದಲೆ ಚಪ್ಪಾಳೆ
ಯಿಕ್ಕುವರು; ಕುಣಿದಾಡಿ ಸ್ವರ್ಗದಂಚಿಗೆ
ಬಂದು ನಿಲ್ಲುವರು;

ಅಗೊ ಇಗೊ ಎನುವೊಳಗೆ ವರ್ಷಗಳುರುಳಿ
ಬರುವಳೊಬ್ಬಳು ನಿನ್ನ ಬಗಲಿಗೆ; ಮನ್ನೆಯರ
ಕೊರತೆಯೇ ಅಮ್ಮನಿಗೆ ಕನ್ನಡಿ ಹಿಡಿದಂತಿರುವ ಈ
ಅಪರೂಪ ಸೊಗಸುಗಾರನಿಗೆ; ನನ್ನ ಸೊಸೆಗೆಂದೂ
ನೀನು ಹೇಳುವುದಿಲ್ಲ ನಾನು ಬದುಕಿರುವ ವಿಷಯ;
ನನಗದು ತಿಳಿದಿದೆಯಯ್ಯ ಅದೇ ಸರಿ ಕೂಡ;
ಗುಟ್ಟಾಗಿಯಾದರೂ ಒಂದು ಭಾವಚಿತ್ರವ ಕಳುಹು;
ಇರಲಿ, ಅದನು ಬಿಡು ನಿನ್ನ ಪ್ರಯಾಣ ಕ್ಷೇಮಲಾಭ
ಗಳಿಂದ ಕೂಡಿರಲಿ ಇನ್ನು ಹೊರಡು.